# <u>ಭೂಮಿ ಆಕಾಶವು</u>

ಭೂಮಿ ಆಕಾಶವು  ಸಾಗರ ಸೂರ್ಯ ಚಂದ್ರರು
ಗಗನದ ತಾರೆಗಳು ನಿನ್ನ ಪ್ರೀತಿ ಸಾರಿ ಹೇಳ್ವವು

ಓ ಓ ಹೊಹೊಹೊ ಆಹಾ __ ಆಹಾ ಹಾ ಹಾ
ಲಾ ಲಾ ಲಾಲಾಲಾಲಾ ಒಹೊ
ಓಹೊ ಹೊಹೊ

ಆಕಾಶವನ್ನು ಜ್ಞಾನದಿಂದಲೂ
ನಿರ್ಮಿಸಿದವನು ನೀನಲ್ಲವೇ
ಭೂಮಿಯನ್ನು ಕರುಣೆಯಿಂದಲೂ
ಸ್ಥಾಪಿಸಿದವ ನೀನಲ್ಲವೇ
ನಿನ್ನ ಕೃಪೆ ಅಮೂಲ್ಯವಾದುದು

ಪ್ರೀತಿ ಎಂಬ ನಾವೆಯಲ್ಲಿಯೇ
ನಾನು ದೂರ ಸಾಗುತ್ತಿರುವೆ
ಸೃಷ್ಠಿಯನ್ನು ನೋಡುವಾಗಲೂ
ಅನುಭವಿಸಿ ತಿಳಿಯುವಾಗಲೂ
ನಿನ್ನ ಸ್ತುತಿಯ ನಾ ಹಾಡುವೆ